ದೇವನಹಳ್ಳಿ ಬಳಿ ನಿರ್ಮಿಸಲಿರುವ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಪ್ರಗತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 72(16)

ಸದಸ್ಯರ ಹೆಸರು ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು(ಶಿವಾಜಿನಗರ)

ಉತ್ತರಿಸುವ ಸಚಿವರು ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ, ನಾಗರೀಕ ವಿಮಾನ ಯಾನ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು)

ಪ್ರಶ್ನೆ

ಅ) ದೇವನಹಳ್ಳಿ ಬಳಿ ನಿರ್ಮಿಸಲಿರುವ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಇತ್ತೀಚಿನ ಪ್ರಗತಿ ಬಗ್ಗೆ ವಿವರ ನೀಡುವುದು

ಆ) ಈ ಉದ್ದೇಶಿತ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಎಂದಿನಿಂದ ಕಾರ್ಯಾರಂಭಗೊಳ್ಳುತ್ತಿದ?

ಇ) ಇದಕ್ಕಾಗಿ ಸರ್ಕಾರ ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು?

ಉತ್ತರ

ಅ) 1 ಸೀಮನ್ಸ್ ಕನ್ಸಾರ್ಟಿಯಂನ ಪ್ರಸ್ತಾವನೆಯನ್ನು ಹಾಬೀಫ್ ಕರ್ನಾರ್ಟಿಯಂಗಿಂತ ಶ್ರೇಷ್ಠವಾದುದೆಂಬ ಶಿಫಾರಸ್ಸನ್ನು ಸರ್ಕಾರವು ಜುಲೈ 2001ರಲ್ಲಿ ಒಪ್ಪಿಕೊಂಡಿದೆ

2 ತದನಂತರ ಸೀಮನ್ಸ್ ಕನ್ಸಾರ್ಟಿಯಂನ ಯೋಜನಾ ಪ್ರಸ್ತಾವನೆ ಬಗ್ಗೆ ಚರ್ಚಿಸಲು ಒಂದು 'ಚರ್ಚಾ ಸಂಧಾನ' ತಂದವನ್ನು ಸರ್ಕಾರವು ರಚಿಸಿದೆ

3 ಜುಲೈ ಮತ್ತು ಸಪ್ಟಂಬರ್ ನಡುವೆ ಖಾತರಿಗೊಳಿಸಲ್ಪಟ್ಟ ಗರಿಷ್ಠ ದರವನ್ನು ಅಂತಿಮಗೊಳಿಸುವ ಬಗ್ಗೆ ಹಾಗೂ ಯೋಜನೆಗೆ ರಾಜ್ಯದ ಕನಿಷ್ಠ ಬೆಂಬಲದ ಬಗ್ಗೆ ವ್ಯವಹಾರಿಕ ಚರ್ಚೆ ನಡೆದಿದೆ

4 ತದನಂತರ ಷೇರುದಾರರ ಒಪ್ಪಂದವನ್ನು ಅಂತಿಮಗೊಳಿಸುವ ಬಗ್ಗೆ ಮಾತುಕತೆ ಮುಂದುವರೆದಿದೆ

5 ಷೇರುದಾರರ ಒಪ್ಪಂದಕ್ಕೆ ಸದ್ಯದಲ್ಲಿಯೇ ಸಹಿ ಹಾಕಲ್ಪಡುವುದಿದೆ

ಆ) ವಿಮಾನ ನಿಲ್ದಾಣದ ಕೆಲಸವು ಅಕ್ಟೋಬರ್ 2002ರಲ್ಲಿ ಪ್ರಾರಂಭಗೊಳ್ಳುವ ಮತ್ತು 30 ತಿಂಗಳ ಒಳಗಾಗಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ ವರೀಕ್ಷಾರ್ಧ ಹಾರಾಟಗಳ ನಂತರ ವಿಮಾನ ನಿಲ್ದಾಣವು ಕಾರ್ಯ ಚಟುವಟಿಕೆಗಳನ್ನು 2005ರ 2ನೇ ಅರ್ಧ ವರ್ಷದಲ್ಲಿ ಪ್ರಾರಂಬಿನುವ ನಿರೀಕ್ಷೆ ಇದೆ

ಇ) ಈ ಕೆಳಕಂಡಂತೆ ವೆಚ್ಚ ಮಾಡಲಾಗಿದೆ

1 ಭೂ ಸ್ವಾಧೀನ ರೂ 75 00 ಕೋಟಿ

2 ಪ್ರಾಥಮಿಕ ವೆಚ್ಚ ರೂ 7 80 ಕೋಟಿ

ಚಿಕ್ಕೋಡಿ ಡಿವೋದ ವ್ಯಾಪ್ತಿಯ ಹಳೆ ಬಸ್ಸುಗಳನ್ನು ಬದಲಿಸುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 73(424)

ಸದಸ್ಯರ ಹೆಸರು ಶ್ರೀ ಕಟ್ಟಿಮನಿ ಮನೋಹರ ಶಿವಪುತ್ರ (ಚಿಕ್ಕೋಡಿ)

ಉತ್ತರಿಸುವ ಸಚಿವರು ಶ್ರೀ ಸಿ.ಆರ್ ಸಗೀರ್ ಅಹಮದ್(ಸಾರಿಗೆ ಸಚಿವರು)

ಪ್ರಶ್ನೆ

ಅ) ಚಿಕ್ಕೋಡಿ ಘಟಕದ ವ್ಯಾಪ್ತಿಯಲ್ಲಿರುವ ಬಸ್ಸುಗಳು ಹಳೆಯದಾಗಿದ್ದು ಅವು ಪದೇ ಪದೇ ತಾಂತ್ರಿಕ ದೋಷಕ್ಕೆ ಒಳಗಾಗಿ ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಚಿಕ್ಕೋಡಿ ಘಟಕಕ್ಕೆ ಸುವಿಹಾರಿ ಬಸ್‌ನ್ನೊಳಗೊಂಡಂತೆ ಹೊಸ ಬಸ್‌ಗಳನ್ನು ಹಾಕುವ ವಿಚಾರ ಸರ್ಕಾರಕ್ಕೆ ಇದೆಯೇ?

ಇ) ಅದು ಯಾವಾಗ ಹಾಗೂ ಎಷ್ಟು ದಿನಗಳೊಳಗಾಗಿ ಒದಗಿಸಲಾಗುವುದು?

ಉತ್ತರ

ಅ) ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಚಿಕ್ಕೋಡಿ ಘಟಕಕ್ಕೆ ಒಟ್ಟು 94 ಬಸ್ಸುಗಳನ್ನು ಒದಗಿಸಲಾಗಿರುತ್ತದೆ ಸಂಸ್ಥೆಯು ಸಾಮಾನ್ಯವಾಗಿ 7 5 ಲಕ್ಷ ಕಿ ಮಿ ಗಳನ್ನು ಕ್ರಮಿಸಿ ದುಸ್ಥಿತಿಯಲ್ಲಿರುವ ವಾಹನಗಳನ್ನು ನಿಷ್ಕ್ರಿಯಗೊಳಿಸಿ ಬದಲಾಯಿಸಲು